೯	ಎಂ. ಆರ್. ವೈದ್ಯ ಮಹಾವಿದ್ಯಾಲಯ, ಗುಲ್ಬರ್ಗಾ	೫೭	೯೩
೧೦	ಆಲ್. ಅಮಿನ್ ವೈದ್ಯ ಮಹಾವಿದ್ಯಾಲಯ, ಬಿಜಾಪುರ	೩೦	೯೦
೧೧	ಆದಿಚುಂಚನಗಿರಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಬೆಳ್ಳೂರು	೩೦	೧೨೦
೧೨	ಬಿ ಎಲ್ ಡಿ ಇ ಮಹಾವಿದ್ಯಾಲಯ, ಬಿಜಾಪುರ	—	೧೩೦
೧೩	ಜೆ ಎಸ್ ಎಸ್ ವೈದ್ಯ ಮಹಾವಿದ್ಯಾಲಯ, ಮೈಸೂರು	೩೭	೧೧೩
೧೪	ದೇವರಾಜ ಅರಸ್ ವೈದ್ಯ ಮಹಾವಿದ್ಯಾಲಯ, ಕೋಲಾರ	೨೬	೧೦೪

ಕಳ್ಳಭಟ್ಟಿ ಮದ್ಯದಿಂದ ಮರಣ ಹೊಂದಿರುವ ಬಗ್ಗೆ

೧೪೪೫. ಶ್ರೀ ಆರ್. ವೆಂಕಟರಾಮಯ್ಯ (ಮಂಗಳಾಗಿಲು).—ಮಾನ್ಯ ರಾಜ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ೧೯೮೬–೮೭ ಮತ್ತು ೧೯೮೭–೮೮ ನೇ ಸಾಲಿನಲ್ಲಿ ಕಳ್ಳ ಭಟ್ಟಿ ಮದ್ಯವನ್ನು ಕುಡಿದು ಮರಣ ಹೊಂದಿದವರ ಸಂಖ್ಯೆ ಎಷ್ಟು ?

ಆ) ಬೆಂಗಳೂರು ಉತ್ತರ ತಾಲ್ಲೂಕು ಮತ್ತು ಹೊಸಕೋಟೆ ತಾಲ್ಲೂಕುಗಳಲ್ಲಿ ಕಳ್ಳ ಭಟ್ಟಿಯಲ್ಲಿ ಉತ್ಪಾದನೆ ಮತ್ತು ಮಾರಾಟ ವಿಪರೀತವಾಗಿರುವುದು ಸರಕಾರಕ್ಕೆ ಗೊತ್ತಿದೆಯೇ ?

ಇ) ರಾಜ್ಯದಲ್ಲಿ ಇಂತಹ ನ್ಯಾಯ ಬಾಹಿರ ವ್ಯವಹಾರಗಳನ್ನು ತಡೆಗಟ್ಟಲು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಡಿ. ಬಿ. ಇನಾಂದಾರ್ (ಅಬಕಾರಿ ಸಚಿವರು).—

ಅ) ಸದ್ಯದಲ್ಲಿರುವ ಮಾಹಿತಿಯಂ ಪ್ರಕಾರ ರಾಜ್ಯದಲ್ಲಿ ೧೯೮೬–೮೭ನೇ ಸಾಲಿನಲ್ಲಿ ಯಾರೂ ಮರಣ ಹೊಂದಿರುವುದಿಲ್ಲ, ೧೯೮೭–೮೮ನೇ ಸಾಲಿನಲ್ಲಿ ವಿಷಪೂರಿತ ಮದ್ಯವನ್ನು ಸೇವಿಸಿ ನಾಲ್ಕು ಜನರು ಮರಣ ಹೊಂದಿರುವರೆಂದು ಆಪಾದಿಸಲಾಗಿದೆ.

ಆ) ತಾಲ್ಲೂಕಿನ ಕೆಲವೊಂದು ಪ್ರದೇಶಗಳಲ್ಲಿ ದುರ್ಜನರು ಇಂತಹ ಕೃತ್ಯಗಳನ್ನು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಕಳ್ಳಭಟ್ಟಿ ತಯಾರಿಕಾ ಕೇಂದ್ರಗಳ ಮೇಲೆ ದಾಳಿ ಮಾಡುವುದೇ ಅಲ್ಲದೆ ಅನುಮಾನಾಸ್ಪದವಾದ ಕಳ್ಳಭಟ್ಟಿ ತಯಾರಿಕಾ ಕೇಂದ್ರಗಳಿರುವ ಪ್ರದೇಶಗಳಲ್ಲಿ ನಿಯತವಾಗಿ ಗಸ್ತುಗಳನ್ನು ಏರ್ಪಡಿಸಲಾಗಿದೆ, ಅಬಕಾರಿ ಕಾನೂನನ್ನು ಬಿಗಿ ಗೊಳಿಸಲಾಗಿದೆ.

೨ ಗಮನ ಸೆಳೆಯುವ ಸೂಚನೆಗಳು

೧ ಸುರಪುರ ತಾಲ್ಲೂಕಿನ ದೇವಪ್ಪರದಲ್ಲಿ ಹರಿಜನರ 40 ಮನೆಗಳು ಹಾಗೂ ೨೧ ಗುಡಿಸಲುಗಳು ಪೂರ್ಣವಾಗಿ ಸುಟ್ಟು ಹೋಗಿರುವುದು

ಶ್ರೀಮದನ ಗೋಪಾಲ ನಾಯಕ್ (ಶೋರಾಪುರ).—ಸನ್ಮಾನ್ಯ ಅಧ್ಯಕ್ಷರೇ ಸುರಪುರ ತಾಲ್ಲೂಕಿನ, ದೇವಪ್ಪರದಲ್ಲಿ ಹರಿಜನರ ೪೦ ಮನೆಗಳು ಹಾಗೂ ೨೧ ಗುಡಿಸಲುಗಳು ಪೂರ್ಣವಾಗಿ ಸುಟ್ಟು ಹೋಗಿರುವುದಕ್ಕೆ, ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಹಣ ಒದಗಿಸುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ವೀರಣ್ಣ (ಸಣ್ಣ ಉಳಿತಾಯ, ಬಂಧಿಖಾನೆ ಮತ್ತು ಗೃಹಖಾತೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಮುಖ್ಯ ಮಂತ್ರಿಗಳ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ದಿನಾಂಕ ೭.೫-೮೮ ರಂದು ಗುಲಬರ್ಗಾ ಜಿಲ್ಲೆಯ ಶೋರಾಪುರ ಪೋಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿನ ದೇವಾಪುರ ಗ್ರಾಮದಲ್ಲಿ ಹರಿಜನ ಕಾಲೋನಿಯಲ್ಲಿ ಬೆಂಕಿ ಅಪಘಾತವಾಗಿ ಒಟ್ಟು ೬೩ ಮನೆಗಳು ಮತ್ತು ಗುಡಿಸಲುಗಳು ಸುಟ್ಟು ಹೋಗಿವೆ. ಈ ಅಪಘಾತದಲ್ಲಿ ಮೊರಪ್ಪ ಕಾಡಗಿಯವರ ಪತ್ನಿ ಮಲ್ಲಪ್ಪ ಎಂಬ ೫೦ ವರ್ಷದ ಹರಿಜನ ಮಹಿಳೆ ಮತ್ತು ಭೀಮಪ್ಪ ಮಗ ನಿಂಗಪ್ಪ ಎಂಬ ಒಂಭತ್ತು ವರ್ಷದ ಹರಿಜನ ಹುಡುಗ ಮೃತರಾಗಿದ್ದಾರೆ. ಈ ಅಪಘಾತದಲ್ಲಿ ಒಟ್ಟು ರೂ. ೨,೮೫,೬೦೦ ನಷ್ಟವಾಗಿದೆ. ೪ ಹಸುಗಳು ಸಹ ಸುಟ್ಟು ಹೋಗಿವೆ.

ಈ ಅಪಘಾತದಲ್ಲಿ ತೊಂದರೆಗೊಳಪಟ್ಟವರ ಕುಟುಂಬದವರಿಗೆ ತಲಾ ರೂ ೮೦೦ ರಂತೆ ಒಟ್ಟು ೪೫,೮೦೦ ಪರಿಹಾರ ಧನ ಹಂಚಿರುವುದಾಗಿ ವರದಿಯಾಗಿದೆ. ಹಾಗೂ ಕೃಷ್ಣ ಮೇಲ್ದಂಡೆ ಯೋಜನೆ ವಸತಿ ಗೃಹದಲ್ಲಿ ತಾತ್ಕಾಲಿಕ ವಸತಿಯನ್ನು ಏರ್ಪಾಟು ಮಾಡಲಾಗಿದೆ. ಕಂದಾಯ ಇಲಾಖೆ ಅಧಿಕಾರಿಗಳು ವೈಯಕ್ತಿಕ ಅಪಘಾತ ವಿಮಾ ಯೋಜನೆ ಮತ್ತು ಹೊಸ ಗುಡಿಸಲುಗಳ ವಿಮಾ ಯೋಜನೆಯಂತೆ ಪರಿಹಾರ ಧನ ಕೊಡಿಸಲು ಪ್ರಯತ್ನ ಮಾಡುತ್ತಿದ್ದಾರೆ. ಜಿಲ್ಲಾ ಪರಿಷತ್ ಅಧ್ಯಕ್ಷರು ತೊಂದರೆಗೊಳಪಟ್ಟವರಿಗೆ ಜನತಾ ಮನೆಗಳನ್ನು ಕಟ್ಟಿಕೊಡುವುದಾಗಿ ತಿಳಿಸಿದ್ದಾರೆಂದು ವರದಿಯಾಗಿದೆ. ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಪರಿಹಾರ ಕೊಡುವುದರ ಬಗ್ಗೆ ಡೆಪ್ಯುಟಿ ಕಮಿಷನರ್‌ರವರಿಂದ ಪ್ರಸ್ತಾವ ಬಂದನಂತರ ಪರಿಶೀಲಿಸಲಾಗುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಮಾನ್ಯ ಸಚಿವರು ಕೊಟ್ಟಂತಹ ಸ್ಟೇಟ್‌ಮೆಂಟ್ ಪ್ರಕಾರವೇ ಸರ್ಮಾರು ೬೩ ಹರಿಜನರ ಮನೆಗಳು ಸುಟ್ಟು ಹೋಗಿವೆ. ನಾನು ಕೇಳಿಕೊಳ್ಳುತಕ್ಕದ್ದು ಇಷ್ಟೇ, ಕನಿಷ್ಟಪಕ್ಷ ಜನತಾ ಹೌಸಿಂಗ್ ಸ್ಕೀಮ್‌ನಲ್ಲಿ ಇವರೆಲ್ಲರಿಗೂ ಒಂದು ಮನೆಯನ್ನು ಕಟ್ಟಿಸಿಕೊಡತಕ್ಕ ವ್ಯವಸ್ಥೆ ಮಾಡುತ್ತೀರಾ ? ಜಿಲ್ಲಾ ಪರಿಷತ್‌ಗೆ ಒಪ್ಪಿಸಿದ್ದೀವೆ ಎಂದು ತಾವು ಹೇಳುತ್ತೀರಿ, ಆದರೆ ಜಿಲ್ಲಾ ಪರಿಷತ್‌ಗೆ ಕೊಟ್ಟಿರತಕ್ಕಂಥ ಅಲಾಟ್‌ಮೆಂಟ್‌ನ್ನು ಅವರು ತಮ್ಮ ಕ್ಷೇತ್ರದಲ್ಲಿ ಹಂಚಿಕೊಂಡು ಬಿಟ್ಟಿದ್ದಾರೆ. ಇದಕ್ಕೆ ಸ್ಪೆಷಲ್ ಆಗಿ ಅಲಾಟ್‌ಮೆಂಟ್ ಕೊಟ್ಟು ಈ ೬೩ ಮನೆಗಳನ್ನು ಕಟ್ಟಿಸಿಕೊಡತಕ್ಕ ವ್ಯವಸ್ಥೆ ಮಾಡುತ್ತೀರಾ. ಹೇಗೆ ? ಎರಡನೆಯದಾಗಿ ಡೆಪ್ಯುಟಿ ಕಮಿಷನರ್‌ರವರಿಂದ ವರದಿ ಬಂದ ತಕ್ಷಣ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಹಣ ಕೊಡುವುದಾಗಿ ಹೇಳಿದ್ದೀರಿ. ಈಗಾಗಲೇ ತಮಗೆ ವರದಿ ಬಂದಿರಬೇಕು. ಕಾಲಿಂಗ್ ಅಟೆನ್‌ಷನ್ ನೋಟೀಸ್ ಕೊಟ್ಟ ತಕ್ಷಣ ತಹಸೀಲ್ದಾರ್‌ರವರಿಂದ, ಜಿಲ್ಲಾಧಿಕಾರಿಗಳ ಮುಖಾಂತರವೇ ವರದಿ ಬರಬೇಕು. ಆದುದರಿಂದ ಅದು ಈಗಾಗಲೇ ಬಂದಿರಬೇಕು. ಅವರ ಮನೆಗಳೆಲ್ಲಾ ಜಳಜಳ ಆಗಿದೆ, ಸುಟ್ಟು ಹೋಗಿದೆ ಅದಕ್ಕೆ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಹಣವನ್ನು ಕೊಡತಕ್ಕ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೇ, ಹರಿಜನರದ್ದೇ ಆಗಲೀ, ಹಿಂದುಳಿದ ವರ್ಗದವರದ್ದೇ ಆಗಲೀ ಅಥವಾ ಬೇರೆಯವರದ್ದೇ ಆಗಲೀ ಅವರ ಮನೆಗಳು ಸುಟ್ಟು ಹೋಗಿ, ಅವರು ನಿರ್ಗತಿಕರಾದಮೇಲೆ, ಅವರಿಗೆ ನಿವೇಶನಗಳನ್ನು ಕೊಟ್ಟು ಮನೆಗಳನ್ನು ಕಟ್ಟಿಸಿಕೊಡತಕ್ಕದ್ದು ಸರಕಾರದ ಕರ್ತವ್ಯ. ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಂಡಿದ್ದೇವೆ. ಹಣ ಎಷ್ಟೇ ವಿರ್ಚಾಗಲೀ ಪ್ರತಿಯೊಬ್ಬರಿಗೂ ಒಂದೊಂದು ಜನತಾ ಮನೆಗಳನ್ನು ಕಟ್ಟಿಸಿಕೊಡುವ ವ್ಯವಸ್ಥೆ ಮಾಡಬೇಕೆಂದು ನಾವು ಜಿಲ್ಲಾ ಪರಿಷತ್‌ಗೆ ಸೂಚನೆ ಕೊಡುತ್ತೇವೆ. ಇದರಲ್ಲಿ ಸ್ಪೆಷಲ್ ಆಗಿ ಹರಿಜನರ ಗುಡಿಸಲುಗಳೇ ಹೋಗಿರುವುದರಿಂದ ನಾವು ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ ಇದರಲ್ಲಿ ಇಂಡಿವಿಜ್ಯುಯಲ್ ಲಾಸ್ ಎಷ್ಟಾಗಿದೆ ಎಂಬುದನ್ನು ವರದಿ ಮಾಡಬೇಕೆಂದು ನಾವು ಎಸ್. ಪಿ. ಗೆ ಆರ್ಡರ್ಸ್ ಮಾಡಿರುತ್ತೇವೆ. ಅವರಿಂದ ಡಿ.ಸಿ. ಮೂಲಕ ವರದಿ ಬಂದ ತಕ್ಷಣ ಇಂಡಿವಿಜ್ಯುಯಲ್ ಲಾಸ್ ಎಷ್ಟಾಗಿದೆ ನೋಡಿಕೊಂಡು ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಪರಿಹಾರ ಕೊಡುತ್ತೇವೆ. ಇದರಲ್ಲಿ ಅಷ್ಟು ಕೊಡಬೇಕು, ಇಷ್ಟು ಕೊಡಬೇಕು ಎಂಬ ನಿಬಂಧನೆ ಇಲ್ಲ. ಒಕ್ಕಾಲು ಉದಾರವಾಗಿ ಅವರಿಗೆ ಪರಿಹಾರ ನಿಧಿಯಿಂದ ಹಣ ಕೊಡಿಸುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಮದನ ಗೋಪಾಲ ನಾಯಕ್.—ಈ ಬೆಂಕಿ ಅಪಘಾತದಲ್ಲಿ ತೊಂದರೆಗೊಳಪಟ್ಟ ಕುಟುಂಬದವರಿಗೆ ತಲಾ ೮೦೦ ರೂಪಾಯಿಗಳನ್ನು ಕೊಟ್ಟಿರುತ್ತೇವೆಂದು ಹೇಳಿದ್ದಾರೆ. ಆದರೆ ಎಲ್ಲರಿಗೂ ೮೦೦ ರೂಪಾಯಿಗಳಂತೆ ಕೊಟ್ಟಿಲ್ಲ. ಕೆಲವರಿಗೆ ೫೦೦ ರೂಪಾಯಿ, ೨೦೦ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದೂ ಅಲ್ಲದೆ ಈ ಮನೆ ಸುಟ್ಟು ಹೋಗಿರತಕ್ಕ ಜಾಗದಲ್ಲಿ ಮೂರು ಜನ

ಗ್ಯಾಂಗ್‌ಮನ್‌ಗಳು ಇದ್ದಾರೆ. ನೀವು ಸರಕಾರಿ ನೌಕರರಾಗಿರುವುದರಿಂದ ನಿಮಗೆ ಪರಿಹಾರ ಧನ ಕೊಡುವುದಕ್ಕೆ ಆಗುವುದಿಲ್ಲ ಎಂದು ಅಲ್ಲಿನ ಅಧಿಕಾರಿಗಳು ಹೇಳಿದ್ದಾರೆ. ಇವರ ಗುಡಿಸಲೂ ಸಹ ಸುಟ್ಟು ಹೋಗಿದೆ. ಎಲ್ಲಾ ಸುಟ್ಟು ಭಸ್ಮವಾಗಿದೆ. ದವಸಧಾನ್ಯಗಳು ಪಾತ್ರೆ ಪರಟೆಗಳು ಎಲ್ಲಾ ಸುಟ್ಟು ಹೋಗಿದೆ, ಉಟ್ಟ ಬಟ್ಟೆಯಲ್ಲಿ ಅವರು ಹೊರಗಡೆ ಇದ್ದಾರೆ. ಜೊತೆಜೊತೆಯಲ್ಲೇ ಅವರ ದುಡ್ಡು ಸಹ ಸುಟ್ಟು ಹೋಗಿದೆ. ಅಕ್ಕುಜ್ಜಯಲ್ ಆಗಿ ಒಬ್ಬರಿಗೆ ೧೦ ಸಾವಿರ, ೧೫ ಸಾವಿರ ನಷ್ಟವಾಗಿದೆ. ತಹಸೀಲ್ದಾರ್‌ರವರು ಸ್ಥಳ ವೀಕ್ಷಣೆ ಮಾಡಿದಮೇಲೆ, ದುಡ್ಡು ಸುಟ್ಟು ಹೋದರೆ ಅದನ್ನು ಕೊಡುವುದಕ್ಕೆ ಆಗುವುದಿಲ್ಲ ನಿಮ್ಮ ಆದಾಯ ನೋಡಿಕೊಂಡು ಪರಿಹಾರ ಕೊಡುತ್ತೇವೆ ಎಂದು ಹೇಳಿದ್ದಾರೆ. ಈ ೮೦೦ ರೂಪಾಯಿಗಳನ್ನೂ ಸಹ ಎಲ್ಲರಿಗೂ ಕೊಟ್ಟಿಲ್ಲ. ಎಂಟುನೂರು ರೂಪಾಯಿಗಳಿಗಿಂತ ಕಡಿಮೆ ಕೊಟ್ಟಿರತಕ್ಕ ಜನರಿಗೆ ಪರಿಹಾರ ನಿಧಿಯಿಂದ ಹೆಚ್ಚು ಪರಿಹಾರ ಧನ ಕೊಡುವುದಕ್ಕೆ ಸಾಧ್ಯ ಇದೆಯೇ ? ಈಗಾಗಲೇ ಡೆಪ್ಯುಟಿ ಕಮಿಷನರ್‌ರವರಿಂದ ವರದಿ ತನಗೆ ಬಂದಿರಬಹುದು. ಅವರೂ ಸ್ಥಳ ವೀಕ್ಷಣೆ ಮಾಡಿರುತ್ತಾರೆ. ರಿಪೋರ್ಟ್ ಕೂಡಾ ಬಂದಿದೆ ಎಂದು ಕಾಣುತ್ತದೆ. ಆ ರಿಪೋರ್ಟ್ ಬಂದಕೂಡಲೇ ಪರಿಹಾರಧನ ಕೊಡುವುದಾಗಿ ತಾವೂ ಕೂಡಾ ಹೇಳಿದ್ದೀರಿ. ಈಗಾಗಲೇ ರಿಪೋರ್ಟ್ ಬಂದಿದೆ, ಆದಕಾರಣ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಯಾವಾಗ ಹಣವನ್ನು ಬಿಡುಗಡೆ ಮಾಡುತ್ತೀರಿ, ಎಷ್ಟು ದಿವಸದಲ್ಲಿ ಎಷ್ಟು ಕೊಡುತ್ತೀರಿ ಎಂಬುದನ್ನು ನಿರ್ದಿಷ್ಟವಾಗಿ ಹೇಳಿದರೆ ಒಳ್ಳೆಯದು.

ಶ್ರೀ ವೀರಣ್ಣ.—ನಾನು ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದೇನೆ. ಗ್ಯಾಂಗ್‌ಮೆನ್‌ಗಳಿಗೆ ಪರಿಹಾರ ಕೊಡುವುದಕ್ಕೆ ಅವಕಾಶ ಇಲ್ಲದಿರಬಹುದು. ಆದರೆ ಈ ಮೂರು ಜನ ಗ್ಯಾಂಗ್‌ಮನ್‌ಗಳು ಏನಿದ್ದಾರೆ ಇವರಿಗೆ ವಿಶೇಷ ಸಂದರ್ಭ ಎಂದು ಪರಿಗಣಿಸಿ, ಅವರಿಗೆ ೫೦೦ ರೂಪಾಯಿ ಸಂಬಳ ಬರಲಿ, ಎಷ್ಟೇ ಬರಲಿ ಲೆಕ್ಕಕ್ಕೆ ತೆಗೆದುಕೊಳ್ಳದೇ, ವಿಶೇಷ ಸಂದರ್ಭ ಎಂದು ಪರಿಗಣಿಸಿ ಎಲ್ಲರಿಗೂ ಕೊಡುವ ರೀತಿಯಲ್ಲಿ ಪರಿಹಾರ ಕೊಡುತ್ತೇವೆ ಅದಕ್ಕೆ ವ್ಯವಸ್ಥೆ ಮಾಡುತ್ತೇವೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. The S. P. has been authorised to assess the individual loss caused by the fire. ಅವರು ಎಷ್ಟೆಷ್ಟು ಎಂದು ಮಾಹಿತಿ ಕೊಡುತ್ತಾರೆ, ಅದರ ಪ್ರಕಾರ ಮೆರಿಟ್ ನೋಡಿಕೊಂಡು ಹಣ ಕೊಡುವುದಕ್ಕೆ ತಕ್ಷಣ ವ್ಯವಸ್ಥೆ ಮಾಡುತ್ತೇವೆ.

೧೨-೩೦ ಪಿ. ಎಂ.

ಶ್ರೀ ಪದನಗೋಪಾಲ ನಾಯಕ್.—ಮಾನ್ಯ ಅಧ್ಯಕ್ಷರೇ, ಮನೆಗಳನ್ನು ಯಾವಾಗ ಅಲಾಟ್ ಮಾಡುತ್ತಾರೆ, ಯಾವಾಗ ಮನೆಗಳನ್ನು ಕಟ್ಟಿಸಿಕೊಡುತ್ತಾರೆ, ಎಷ್ಟು ದಿವಸದಲ್ಲಿ ಪರಿಹಾರವನ್ನು ಕೊಡುತ್ತಾರೆ ಅದನ್ನು ತಿಳಿಸಬೇಕು.

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೇ, ಮನೆ ಕಟ್ಟಬೇಕಾದರೆ ಬರೇ ದುಡ್ಡು ಇದ್ದರೆ ಕಟ್ಟುವುದಕ್ಕೆ ಆಗುವುದಿಲ್ಲ. ನಿವೇಶನಗಳು ಬೇಕಾಗುತ್ತದೆ. ನಿವೇಶನಗಳನ್ನು ಒದಗಿಸಿಕೊಂಡು ಆದಷ್ಟು ಬೇಗ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

2) ಸಿದ್ದಾಪುರ ತಾಲ್ಲೂಕಿನ ಹಲಗೇರಿ ಹಾಗೂ ಹೊಸೂರು ಗ್ರಾಮಗಳಲ್ಲಿ ಕಾಲರಾ ಕಾಯಿಲೆಯಿಂದ ಜನರು ಸತ್ತಿರುವುದರ ಬಗ್ಗೆ

ಶ್ರೀ ಗೋಪಾಲ ಮುಕಾಂದ ಕಾನಡೆ.—ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನಲ್ಲಿ ಹಲಗೇರಿ ಹಾಗೂ ಹೊಸೂರು ಗ್ರಾಮಗಳಲ್ಲಿ ಕಾಲರಾ ಕಾಯಿಲೆಯಿಂದ ಇಬ್ಬರು ಸತ್ತಿದ್ದು ಹಾಗೂ ಸುಮಾರು ೧೫-೨೦ ಜನರು ಇನ್ನು ಕಾಲರಾ ಕಾಯಿಲೆಯಿಂದ ನರಳುತ್ತಿರುವ ಬಗ್ಗೆ ಮಾನ್ಯ ಆರೋಗ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ.—(ಆರೋಗ್ಯ ಸಚಿವರು)—ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿಗೆ ಹಲಗೇರಿ ಮತ್ತು ಹೊಸೂರು ಗ್ರಾಮಗಳಲ್ಲಿ ದಿನಾಂಕ ೧೫-೪-೮೮ ರಿಂದ ಅತಿಸಾರ ರೋಗದ ೧೬ ಪ್ರಕರಣಗಳು ಕಂಡು ಬಂದಿದ್ದು ಅವುಗಳಲ್ಲಿ ೨ ಪ್ರಕರಣಗಳು ಮರಣಕ್ಕೀಡಾಗಿವೆ